ಎನ್ನುವ ಚಿತ್ರವನ್ನೂ ಕಟ್ಟುತ್ತಾರೆ. ಇದಕ್ಕೆ ಶಿಖರವೆಂಬಂತೆ–

ಕನ್ನಡ ನಾಡಿನ ಮಕ್ಕಳು ಎಂದಿಗು
ಮನ್ನಣೆ ಎಂದರೆ ಇಂತೇ ನಡೆಯಲಿ
ಚಿನ್ನದ ನಾಡಿದು ಲೋಕತೆ ನಡತೆಯ
ಕನ್ನಡಿಯಾಗಲಿ, ಉನ್ನತಿ ಪಡೆಯಲಿ

ಸತ್ಯವುಳ್ಳವರು ಚಿನ್ನ ಪಡೆದೇ ಬದುಕುವ ವಾತಾವರಣ ಸೃಷ್ಟಿಯಾಗಲಿ ಎನ್ನುವ ಮಾತು ಬರುತ್ತದೆ ನಿಜ. ಆದರೆ, 'ಇಂತೇ ನಡೆಯಲಿ' ಎಂದರೆ ಹೆಣ್ಣಿಗೆ 'ಕೆಡಿಸುವುದ'ರಿಂದಲೂ ಮುಕ್ತಿಯಿಲ್ಲ, ಆತ್ಮಾಹುತಿ ಮಾಡಿಕೊಳ್ಳುವುದರಿಂದಲೂ ಮುಕ್ತಿಯಿಲ್ಲ ಎಂದೇ ಅರ್ಥ ಅಲ್ಲವೇ? ಇಂಥ ಸ್ತ್ರೀಮಾದರಿಗಳನ್ನು, ಸಿದ್ಧ ಮಾದರಿಗಳಾಗಿಸುತ್ತಲೇ, ಇವೇ 'ಆದರ್ಶ' ಎಂದು ಹೇಳುತ್ತಲೇ ಹೆಣ್ಣನ್ನು ಕೊಲ್ಲುವ ದಾರಿಗಳನ್ನು 'ಅಧಿಕೃತ'ಗೊಳಿಸಲಾಯಿತು.

ಈ ಕವಿತೆಗಳು, ಹೆಣ್ಣಿನ ಎದುರಿಗೆ 'ನಾಚು ಪ್ರಿಯೆ' ಎನ್ನುವ ಸಿದ್ದಯ್ಯ ಪುರಾಣಿಕರ ಕವಿತೆ ಭಯಂಕರ ಆಧುನಿಕ, ಮಾನವೀಯ ಆಯಾಮದ್ದು ಎನ್ನಿಸಿಬಿಡುತ್ತದೆ!

ಗಂಡು ಗಂಡಾಗಿ ಉಳಿದು
ಹೆಣ್ಣಿನ ಮಾರ್ದವ ಪಡೆದುಕೊಳ್ಳಲಿ

ಹೆಣ್ಣು ಹೆಣ್ಣಾಗಿ ಉಳಿದು
ಗಂಡಿನ ಗುಂಡಿಗೆಯ
ಗಳಿಸಿಕೊಳ್ಳಲಿ

ಹೀಗೆ ಹೇಳುತ್ತಿರುವಾಗಲೇ ಕವಿಗೆ ಇದು ಹೆಚ್ಚಾಯಿತು ಎನ್ನಿಸಿಬಿಟ್ಟಿತೋ ಏನೋ, ಮರು ಉಸಿರಿನಲ್ಲೇ ಇದನ್ನು ಸರಿಪಡಿಸುವ ಪ್ರಯತ್ನಕ್ಕೂ ಕೈ ಹಾಕುತ್ತಾರೆ.

ಹೆಣ್ಣು ಹೆಣ್ಣೆಂದು
ಗಂಡು ಹೆಣ್ಣಿಗನಾಗದಿರಲಿ
ಗಂಡು ಗಂಡೆಂದು
ಹೆಣ್ಣು ಗಂಡುಬೀರಿಯಾಗದಿರಲಿ

ಎನ್ನುವುದನ್ನು ನೋಡಿದಾಗ – ಗಂಡೇ, ಯಾಕಪ್ಪಾ ನಿನಗೆ ಇಷ್ಟೊಂದು ಅಭದ್ರತೆ, ಅದನ್ನು ಮುಚ್ಚುವ ಅಹಂಕಾರದ ಗುರಾಣಿಯೂ ಬೇಕಾಯಿತಲ್ಲ ಎಂದು ನಿಜಕ್ಕೂ ಅನುಕಂಪವೇ ಹುಟ್ಟಿಬಿಡುತ್ತದೆ.

ಕನ್ನಡದ ಅಪರೂಪದ ಸ್ತ್ರೀವಾದಿ ಕವಿ ಕೆ.ಎಸ್.ನ. ಅವರ 'ನಲವತ್ತರ ಚೆಲುವೆ' ಕವಿತೆ ಹೆಣ್ಣಿನ ಅಪರಿಹಾರ್ಯ ಗೊಂದಲಗಳನ್ನು ಹಿಡಿಯುವುದರಲ್ಲಿ ಯಶಸ್ವಿಯಾಗುತ್ತದೆ. ನಲವತ್ತರ ಹೆಣ್ಣನ್ನು ಚೆಲುವೆ ಎಂದೇನೂ ಲೋಕ ಒಪ್ಪುವುದಿಲ್ಲ. ಕವಿತೆಯಲ್ಲಿಯೂ ಗೇಲಿಯ ಸಣ್ಣ ಧಾಟಿಯೂ ಇದೆ. ಆದರೂ ಒಳಒಳತೋಟಿಯನ್ನು, ಮನುಷ್ಯ ಸಹಜ ವಿಶ್ವಾಸದಲ್ಲಿ ಇರುವುದನ್ನು ಕಾಣುತ್ತದೆ.

ಬೇಕಿವಳಿಗೆ ಈ ಲೋಕದ ಬಗೆಬಗೆ ಬಯಕೆ,
ಟೀಕೆ
ಹುಡುಗರ ಕಂಡರೆ ಹುಡುಗಿಯೆ
ತಾನಾಗುವಳೀಕೆ!
ಬಸ್ಸಿಗೆ ಹತ್ತುವ ಭರದಲಿ ಸೆರಗನು ಬೀಸುವಳೇಕೆ?
ತಾನೊರಗಿರುವೆಡೆಯಿಂದಲೆ ಒಳಗೆಲ್ಲಾ
ನೋಡುವಳು

ಬಯಕೆಗಳನ್ನು ಹತ್ತಿಕ್ಕಿ ಬದುಕುವುದೇ ಹೆಣ್ಣಿನ ಸಹಜ ಬದುಕು ಎಂದು ಅವಳನ್ನು ನಿಯಂತ್ರಿಸುವ ನೂರು ದಾರಿಗಳನ್ನು ಲೋಕ ಹುಡುಕುತ್ತಿರುವಾಗ, ಕೆ.ಎಸ್.ನ. ಅವರಿಗೆ ನಲವತ್ತರ ವಯಸ್ಸು ಬದುಕನ್ನು ಆನಂದಿಸುವ ವಯಸ್ಸೇ, ಅದು ಪ್ರಕೃತಿ ಸಹಜ ಎನ್ನುವುದನ್ನು ಹೇಳುತ್ತಲೇ, ಯೌವನದಲ್ಲಿ ನಿಯಂತ್ರಿಸಿದ್ದನ್ನೆಲ್ಲ ಈ ಹೆಣ್ಣು ಈಗಲಾದರೂ ಪಡೆಯಲು ಪ್ರಯತ್ನಿಸಬಹುದೆ ಎನ್ನುವ ಸಾಧ್ಯತೆಯನ್ನು ಕವಿತೆಯುದ್ದಕ್ಕೂ ತೆರೆದೇ ಇಟ್ಟಿದ್ದಾರೆ. ಆದರೆ ಕೊನೆಗೂ ಲೋಕಕ್ಕೆ ಇವಳ ಹುಡುಕಾಟ, ಬಯಕೆ ಎಲ್ಲದರ ಬಗೆಗೂ ಅಸಡ್ಡೆ ಎನ್ನುವುದರೊಂದಿಗೆ ಕವಿತೆ ಕೊನೆಯಾಗುತ್ತದೆ.

ಹೆಣ್ಣಿನ ಪ್ರತಿರೋಧವೂ ಆದಿಮವೇ. ಸೀತೆ, ಅಪರ್ಣೆ, ಸಾವಿತ್ರಿ, ಊರ್ಮಿಳೆಯರ ಮಾದರಿಯನ್ನು